ಸುರೇಶನೇ ದುಡ್ಡು ಕೊಟ್ಟು ಹೊಡೆಸಿ ಸಪಾಟು ಮಾಡಿಸಿದ್ದ. ಅರಳುಗಿಡಗಳು ತಮ್ಮ ಮನೆಯ ಕಾಂಪೌಂಡಿಗೆ ಆತುಕೊಂಡು ಅದಕ್ಕೂ ಎತ್ತರಕ್ಕೆ ಬೆಳೆದಿದ್ದವು. ಹಾಗೇ ಬಿಟ್ಟರೆ ಇಲಿ, ಹಾವುಗಳು ಮನೆಯೊಳಗೆ ಬರಬಹುದಾದ ಸಾಧ್ಯತೆಯನ್ನು ಊಹಿಸಿ ತುಸು ದೂರದಲ್ಲೇ ಶೆಡ್ಡಿನಲ್ಲಿ ನೆಲೆಸಿದ್ದ ಯಾದಗಿರಿ ಕಡೆಯವರಿಗೆ ಹೇಳಿ ಸ್ವಚ್ಛ ಮಾಡಿಸಿದ್ದ. ಅದಾದ ಒಂದು ವಾರಕ್ಕೆ ಅವರ ಮನೆಗೆ ಕಳ್ಳರು ನುಗ್ಗಿದ್ದು.

ರಮ್ಯಳ ದೃಷ್ಟಿ ಖಾಲಿ ಸೈಟನ್ನು ದಾಟಿ ಅದಕ್ಕೆ ಹೊಂದಿಕೊಂಡಂತೆ ಇರುವ ರಸ್ತೆಯ ಮತ್ತೊಂದು ಬದಿಯ ಶೆಡ್ಡಿನ ಮೇಲೆ ನೆಟ್ಟಿತು. ಎಳೆ ಬಿಸಿಲು ಶೆಡ್ಡಿನ ಒಂದು ಬದಿಯನ್ನು ನೆಕ್ಕುತ್ತಿತ್ತು. ಅದರ ಸುಖಕ್ಕೆ ಶೆಡ್ಡಿನ ಕೆನ್ನೆಗಳು ಹೊಳೆಯುತ್ತಿದ್ದವು. ಅವಳಿಗೆ ತನ್ನ ಗಂಡನ ತಂಗಿಯ ಬೀಗರ ಕಡೆಯವರ ಮನೆಯಲ್ಲಿ ಪೊಮೆರಿಯನ್ ನಾಯಿಯೊಂದು ತನ್ನೊಡತಿಯ ಕೆನ್ನೆಗಳನ್ನು ನೆಕ್ಕುತ್ತಿದ್ದುದು ನೆನಪಿಗೆ ಬಂತು. ಆ ಶೆಡ್ಡಿನ ಮುಂದೆ ರಸ್ತೆಯಲ್ಲಿ ಮೂವರು ಹುಡಗರು ಗಲ್ಲಿ ಕ್ರಿಕೆಟ್ ಆಡಲು ಆಗತಾನೆ ಶುರುವಿಟ್ಟುಕೊಂಡಿದ್ದರು. ಶೆಡ್ಡಿನ ಹಿಂಭಾಗದಲ್ಲಿ ಅರಳುತ್ತಿರುವ ಹೊಗೆ ರೊಟ್ಟಿಯ ಘಮಲನ್ನು ಅವಳ ಮೂಗಿಗೆ ತಾಕಿಸುವ ಹುನ್ನಾರದಲ್ಲಿತ್ತು. ಆ ಶೆಡ್ಡನ್ನು ನೋಡಿದ ಕೂಡಲೆ ಅವಳನ್ನು ಒಂದು ರೀತಿಯ ಪಾಪಪ್ರಜ್ಞೆ ಕಾಡತೊಡಗುತ್ತದೆ. ಈಗಲೂ ಅದೇ ಭಾವದಲ್ಲಿ ಅದರ ಕಡೆ ನೋಡತೊಡಗಿದಳು. ತಮ್ಮ ಮನೆಯಲ್ಲಿನ ಒಡವೆಗಳನ್ನು ಕಳ್ಳರು ಕದ್ದೊಯ್ದ ನಂತರದ ಬೆಳವಣಿಗೆಯಲ್ಲಿ ಅವಳು ಪೊಲೀಸರಿಗೆ ಆ ಶೆಡ್ಡಿನವರ ಮೇಲೆ ಅನುಮಾನ ಇರುವುದಾಗಿ ತಿಳಿಸಿದ್ದಳು. ಸುರೇಶನು ಅವರು ಯಾದಗಿರಿ ಕಡೆಯವರು, ಮನೆ ನಿರ್ಮಾಣದ ಕೆಲಸಕ್ಕೆಂದು ಬಂದವರಾಗಿದ್ದು ಅವರು ಆ ಕೆಲಸ ಮಾಡಿರಲಿಕ್ಕಿಲ್ಲ ಎಂದು ಎಷ್ಟೇ ಹೇಳಿದರೂ ಕೇಳದೆ ಪೊಲೀಸರ ಮುಂದೆ ಹಾಗೆ ಹೇಳಿದ್ದಳು. ಅವಳ ದೂರನ್ನು ಸಮರ್ಥಿಸುವ ಬಲವಾದ ಕಾರಣವೂ ಅವಳಲ್ಲಿತ್ತು. ಖಾಲಿ ಸೈಟಿನಲ್ಲಿದ್ದ ಅರಳುಗಿಡಗಳ ಸಂಸಾರದ ಬೇರುಗಳನ್ನು ಸುಟ್ಟದ್ದು ಅದೇ ಶೆಡ್ಡಿನವರು. ಅದೂ ತಮ್ಮ ಕೋರಿಕೆಯಂತೆ. ಅದಾದ ಒಂದು ವಾರಕ್ಕೆ ಮನೆಯಲ್ಲಿ ಕಳುವಾಗಿರುವುದು. ಅವರು ಅರಳುಗಿಡಗಳನ್ನು ಕಡಿಯುತ್ತಿರುವ ಸಮಯದಲ್ಲೇ ತಾನು ಸುಗುಣಳೊಡನೆ ಫೋನಿನಲ್ಲಿ ಮಾತನಾಡುತ್ತ ಹೊಸದಾಗಿ ಎರಡು ಜೊತೆ ಬಳೆಗಳನ್ನು ಮಾಡಿಸಿಕೊಂಡಿದ್ದಾಗಿ ಹೇಳಿದ್ದಳು. ಅದನ್ನೆಲ್ಲ ಕೇಳಿಸಿಕೊಳ್ಳುವ ಸಾಧ್ಯತೆ ಇದ್ದಿತ್ತಾದ್ದರಿಂದ ಅವಳಿಗೆ ಅವರ ಮೇಲೆಯೇ ಗುಮಾನಿಯಿತ್ತು.



ಪೊಲೀಸಿನವರು ಆ ಶೆಡ್ಡಿನ ವ್ಯಕ್ತಿಯನ್ನು ಸ್ಟೇಷನ್ನಿಗೆ ಕರೆಸಿಕೊಂಡು ತಮ್ಮದೇ ರೀತಿಯಲ್ಲಿ ವಿಚಾರಣೆ ನಡೆಸಿದ ನಂತರ 'ನಿರಪರಾಧಿಗಳು, ಜೊತೆಗೆ ಮುಗ್ಧರು' ಎಂದು ರಮ್ಯಳಿಗೆ ತಿಳಿಸಿ ಬಿಟ್ಟುಬಿಟ್ಟಿದ್ದರು. ಅಂದು ಸಂಜೆ ಗಂಡ ಹೆಂಡತಿ ಇಬ್ಬರೂ ಮಳೆಯ ಜೊತೆಗೆ ರಮ್ಯಳ ಮನೆಯ ಮುಂದೆ ನಿಂತಿದ್ದರು. ಮಳೆಗೆ ನೆನೆಯುತ್ತಾ ನಿಂತಿದ್ದ ಅವರ ಕಂಗಳಿಂದ ಹರಿಯುತ್ತಿದ್ದ ನೀರು ಅವಳಿಗೆ ಸ್ಪಷ್ಟವಾಗಿ ಕಾಣುವಂತಿತ್ತು. ತಣ್ಣಗೆ 'ತಪ್ಪಾಯ್ತು' ಎಂದಷ್ಟೇ ಹೇಳಿ ಕೈ ಮುಗಿದಿದ್ದಳು. ಯಾದಗಿರಿಯ ಕಡೆಯ ಹೆಂಗಸು ತುಸು ಏರು ದನಿಯಲ್ಲೇ, 'ಕೂಲಿ ಮಾಡೋರು ಅಂದ್ರೆ ಕಳ್ರು ಅಂತ ಯಂಗೆ ತಿಳ್ಕಂತೀರಿ' ಎಂದು ಕೇಳಿದ್ದಳು. ರಮ್ಯ ಏನೊಂದೂ ಮಾತನಾಡದೆ ಸುಮ್ಮನಿದ್ದಳು. ಕರಗುವುದನ್ನೇ ಕಲೆಯಾಗಿಸಿಕೊಂಡಿದ್ದ ಅವರು ಮತ್ತಷ್ಟು ಹೊತ್ತು ಮಳೆಯಲ್ಲಿ ನೆನೆದು ಮತ್ತೆ ಸುಮ್ಮನೆ ಹೊರಟುಹೋಗಿದ್ದರು.

ರಮ್ಯಳು ತನ್ನ ದೃಷ್ಟಿಯನ್ನು ಅಡುಗೆಮನೆಯ ಒಳಗೆ ಎಳೆದುಕೊಂಡು ಸ್ಲ್ಯಾಬಿನ ಮೇಲೆ ಚೆಲ್ಲಿದಳು. ಅಸ್ತವ್ಯಸ್ತವಾಗಿ ಬಿದ್ದಿರುವ ಪಾತ್ರೆಗಳು, ಲೋಟಗಳು, ತೊಳೆಯದ ಕುಕ್ಕರ್, ಒಂದೆರಡು ಚಮಚಗಳು, ತೆಪ್ಪಗೆ ಬಿದ್ದಿರುವ ತಟ್ಟೆಗಳು, ಲೈಟರ್, ಒಂದೆರಡು ಟಪ್ಪರ್ ವೇರ್ ಬಾಕ್ಸ್‌ಗಳು... ಜೊತೆಗೆ ಅಲ್ಲಲ್ಲಿ ಓಡಾಡುವ ಏಳೆಂಟು ಇರುವೆಗಳು; ಎಲ್ಲವೂ ತನ್ನ ಮನಸಿನ ಪ್ರತಿರೂಪದಂತೆ ಕಂಡು ಬೆರಗಾದಳು. ಅದು ಆ ಕ್ಷಣಕ್ಕೆ ಅವಳಿಗೆ ನಿಜವೆನಿಸಿತು. ಎಲ್ಲ ಮನೆಗಳ ಕಿಚನ್‌ಗಳು ಹೆಣ್ಣಿನ ಪ್ರತಿರೂಪವೆ ಅಲ್ಲವೆ ಎಂದುಕೊಂಡು ಕೆಳ ತುಟಿಯನ್ನು ತುಸುವೆ ಪಕ್ಕಕ್ಕೆಳೆಯುವಂತೆ ನಕ್ಕಳು. ತೊಳೆಯಲೆಂದು ತೆಗೆದುಕೊಂಡಿದ್ದ ಕ್ಯಾರೆಟ್ಟಿನ ಆಕಾರವೂ ಅವಳ ತುಟಿಯ ನಗುವಿನ ರೇಖೆಯಂತೆಯೇ ಕಂಡು ಅಣಕಿಸಿದ ಹಾಗಾಯ್ತು. ಈ ಅಡುಗೆಮನೆಯನ್ನು ಒಂದಷ್ಟು ಕ್ಲೀನ್ ಮಾಡಿ ನಂತರ ಉಪ್ಪಿಟ್ಟಗಿಟ್ಟರಾಯ್ತೆಂದು ಅಂದುಕೊಳ್ಳುತ್ತಾ ಸ್ಲ್ಯಾಬ್ ಮೇಲಿರುವ ಸಕಲವೆಲ್ಲವನ್ನೂ ಬೇಸಿನ್ನಿನ ಪಕ್ಕಕ್ಕೆ ಇಟ್ಟುಕೊಂಡಳು. ಮತ್ತೆ ಅವಳ ಕಣ್ಣು ಕಿಟಕಿಯ ಚೌಕಟ್ಟು ಮತ್ತು ಸರಳುಗಳ ಮೇಲೆ ಬಿತ್ತು. ಅಷ್ಟು ಗಟ್ಟಿ ಸರಳುಗಳನ್ನು ಕಳ್ಳರು ಕತ್ತರಿಸಿದ್ದಾದರೂ ಹೇಗೆ ಎಂಬುದು ಅವಳಿಗೆ ಇಂದಿಗೂ ಅರ್ಥವಾಗಿಲ್ಲ. ನೆರೆಹೊರೆಯವರು ಮತ್ತು ಪೊಲೀಸರು ಎಂತಹ ಕಟರ್ ಬಳಸಿ ಕತ್ತರಿಸಿರಬಹುದು ಎಂಬುದನ್ನು ವಿವರಿಸಿದ್ದರಾದರೂ ಅವಳಿಗೆ ಅರ್ಥವಾಗಿರಲಿಲ್ಲ.

ಆ ದಿನ ಸಂಜೆ ಮನೆಯ ಬಾಗಿಲು ತೆಗೆದು ರೂಮು ಹೊಕ್ಕಾಗ ಸುರೇಶ ಹಾಗೂ ರಮ್ಯ ಇಬ್ಬರೂ ಅವಕ್ಕಾಗಿದ್ದರು. ತೆರೆದುಕೊಂಡಿದ್ದ ಬೀರು ಬಾಗಿಲು, ಎಳೆದು ಬಿಸಾಡಿರುವ ಬಟ್ಟೆಗಳು, ಚೂರಾಗಿ ನೆಲದ ಮೇಲೆ ಹರಡಿಕೊಂಡಿರುವ ಮಗನ ಪಿಗ್ಗಿಬ್ಯಾಂಕ್, ತೆರೆದುಕೊಂಡು ಬೋರಲು ಬಿದ್ದಿರುವ ರೇಶಿಮೆ ಸೀರೆಯ ಬಾಕ್ಸ್...

ಎರಡು ದಿನಗಳ ಮಟ್ಟಿಗೆ ಗಂಡನ ಜೊತೆಗೆ ತವರಿಗೆಂದು ಹೋಗುವ ಮುಂಚೆ ಕೈಯಲ್ಲಿರುವ ಒಂದು ಜೊತೆ ಬಳೆ ಮತ್ತು ತಾಳಿ ಚೈನನ್ನು ಬಿಟ್ಟು ಮಿಕ್ಕೆಲ್ಲ ಒಡವೆಗಳನ್ನು ರೇಶಿಮೆ ಸೀರೆಯ ಬಾಕ್ಸಿನಲ್ಲಿಟ್ಟು ಅದರ ಮೇಲೆ ಅವು ಕಾಣದಂತೆ ಸೀರೆಯನ್ನು ಮಡಚಿಟ್ಟಿದ್ದಳು. ಅವಳು ಪ್ರತಿ ಬಾರಿ ಎಲ್ಲಿಯಾದರೂ ಒಂದೆರಡು ದಿನಗಳ ಮಟ್ಟಿಗೆ ಹೋಗಬೇಕಾದರೆ ಹಾಗೇ ಮಾಡುತ್ತಿದ್ದುದು. ಸರಿಸುಮಾರು ಮುನ್ನೂರು ಗ್ರಾಮ್ ಚಿನ್ನ. ಏನಿಲ್ಲವೆಂದರೂ ಏಳೆಂಟು ಲಕ್ಷ ಬೆಲೆ ಬಾಳುತ್ತಿದ್ದವು. ಜೊತೆಗೆ ಒಂದು ಕಡೆ ಇಟ್ಟಿದ್ದ ಅರವತ್ತು ಸಾವಿರ ನಗದು ಮತ್ತು ಮಗನ ಪಿಗ್ಗಿ ಬ್ಯಾಂಕಿನದ್ದು... ಇಬ್ಬರೂ ಕೂಗಾಡುತ್ತ ಆಚೆ ಬಂದಿದ್ದರು. ಅಕ್ಕಪಕ್ಕದ ಮನೆಯ ಒಂದಿಬ್ಬರು ಗಂಡಸರು ಬಂದು ಮನೆಯನ್ನೆಲ್ಲ ತಡಕಾಡಿ ಅಡುಗೆ ಮನೆಯಲ್ಲಿರುವ ಕಿಟಕಿಯ ಸರಳುಗಳನ್ನು ಕತ್ತರಿಸಿ ಒಳಗೆ ಬಂದಿರುವ ಬಗೆಯನ್ನು ಕಂಡುಹಿಡಿದಿದ್ದರು. ನಂತರ ಅವರ ಸಹಾಯದಿಂದಲೇ ಸುರೇಶ ಮತ್ತು ರಮ್ಯ ಅಮೃತಹಳ್ಳಿ ಪೊಲೀಸ್ ಸ್ಟೇಷನ್ನಿನಲ್ಲಿ ದೂರುಕೊಟ್ಟಿದ್ದರು. ಅವರು ಪ್ರಥಮ ಮಾಹಿತಿಯನ್ನು ದಾಖಲಿಸಿಕೊಂಡು ಸ್ಥಳದ ಮಹಜರು ಮಾಡಿ ಎಸ್‌ಪಿ ಕಚೇರಿಗೆ ವರದಿ ಸಲ್ಲಿಸಿದ್ದರು. ಮತ್ತೆ ಅದು ಅಲ್ಲಿಂದ ಚಾರ್ಜ್‌ಶೀಟ್ ಸಹ ಆಗಿ ಕೋರ್ಟನ್ನು ಹೊಕ್ಕಿತ್ತು. ಒಂದು ಬಾರಿ ಇಬ್ಬರೂ ತಾಲ್ಲೂಕು ಕೋರ್ಟಿಗೆ ಹೋಗಿ ಬಂದದ್ದೂ ಆಯಿತು. ಅಷ್ಟರಲ್ಲಿ ಒಂದು ದಿವಸ ಎಸ್‌ಐ ನೇರ ಇವರ ಮನೆಗೆ ಬಂದು, 'ಸುಮ್ಮನೆ ರಗಳೆ ಯಾಕೆ... ಪ್ರತೀ ತಿಂಗಳು ಕೋರ್ಟಿಗೆ ಅಲೆದಾಡಬೇಕು... ಆ ಬಡ್ಡಿಮಕ್ಳಂತೂ ಸಿಗೋದಿಲ್ಲ. ನನ್ನ ಬಳಿ ಒಂದು ಉಪಾಯವಿದೆ. ಅದರಂತೆ ನಡೆದರೆ ನಿಮ್ಮದಲ್ಲದಿದ್ದರೂ ಅಷ್ಟೇ ಬೆಲೆ ಬಾಳುವ ಒಡವೆಗಳು ನಿಮ್ಮವಾಗುತ್ತವೆ' ಎಂದು ನುಡಿದಿದ್ದ. ಸುರೇಶ ಆಯ್ತು ಎನ್ನುವಂತೆ ತಲೆಯಾಡಿಸಿದ್ದ. ಆ ಎಸ್‌ಐ, 'ನೋಡಿ ಇರೋ ವಿಷಯ ಹೇಳ್ಬಿಡ್ತೀನಿ. ನಮ್ಮ ಸುಪರ್ದೀಲಿ ಸಾಕಷ್ಟು ಒಡವೆಗಳಿರ್ತಾವೆ. ಎಲ್ಲೋ ಸಿಕ್ಕಿದ್ದು... ಯಾರೋ ಕದ್ದಿದ್ದು... ಕಳ್ಳ ಸಿಕ್ಕ ಹಾಗೆ ತಪ್ಪಿಸಿಕೊಳ್ಳೋದು... ಹೀಗೆ ಯಾರ ಒಡವೆಗಳು ಎಂದು ನಮಗೂ ಕಂಡುಹಿಡಿಯಲು ಆಗೋದಿಲ್ಲ. ನಿಮ್ಮವು ಮುನ್ನೂರು ಗ್ರಾಂ ತೂಗುತ್ತಿದ್ದವು ಎಂದಿರಲ್ಲವೆ... ನಮ್ಮ ಎಸ್‌ಪಿ ಆಫೀಸಿಗೆ ಬನ್ನಿ... ಇಪ್ಪತ್ತು ಗ್ರಾಂ ಆಚೆ ಈಚೆ ತೂಗುವ ಅಷ್ಟೇ ಒಡವೆಗಳ್ನ ನಿಮ್ಮವೇನಾ ಎಂದು ಕೇಳ್ತಾರೆ. ಹುಂ ಅನ್ನಿ... ಅವನ್ನು ನಿಮ್ಗೆ ಕೊಟ್ಟು ಕಳ್ಳ ಸಿಕ್ಕಿಲ್ಲ ಅಂತಲೋ ಅಥವಾ ಇನ್ಯಾರದೋ ಕಳ್ಳನ ತಲೆಗೆ ಕಟ್ಟಿ ಕೇಸ್ ಕ್ಲೋಸ್ ಮಾಡ್ತಾರೆ. ಆದ್ರೆ ನೀವು ನನ್ನ ಕೈಗೆ ಒಂದು ಲಕ್ಷ ನಗದು ಕೊಡಬೇಕಾಗುತ್ತೆ. ನನ್ನೊಬ್ಬನಿಗೆ ಅಲ್ಲ... ಅದರ ಪಾಲು ಮೇಲಿನವರಿಗೂ ಸೇರಬೇಕು' ಎಂದು ನುಡಿದಿದ್ದ.

ಸುರೇಶ ಹೆಚ್ಚು ಕಮ್ಮಿ ಒಪ್ಪಿದ್ದನಾದರೂ ರಮ್ಯಳು 'ತಪ್ಪಲ್ಲವೆ ಸಾರ್' ಎಂದು ರಾಗ ತೆಗೆದಿದ್ದಳು. ಯಾರದೋ ಸ್ವತ್ತು ತಮಗೇಕೆ? ಅಂತಹದ್ದನ್ನು